ಆತನ ಬಳಿ ಸಾಕಷ್ಟು ಉಡುಪುಗಳಿಲ್ಲದಿದ್ದರೂ, ಕೈಲಾಸ ಬಾಬು ಎಲ್ಲ ಸಂದರ್ಭಗಳಲ್ಲೂ ತನ್ನ ಉಡುಪಿನ ವಿಷಯವಾಗಿ ಕ್ರೀಡಾಪಟುವಿನ ಶಿಸ್ತು ಕಾಯ್ದುಕೊಂಡಿದ್ದ. ಪ್ರತಿದಿನ ಆತ ತನ್ನ ಅಂಗಿಗಳನ್ನು, ಜ್ಯಾಕಿಟುಗಳನ್ನು, ಕೋಟು ಷರಾಯಿಗಳನ್ನು ತುಂಬ ಕಾಳಜಿಯಿಂದ ತೊಳೆಯುತ್ತಿದ್ದ. ನಂತರ ತನ್ನ ಬೆಡ್‌ಶೀಟು, ತಲೆದಿಂಬು ಹೊದಿಕೆ, ತಾನು ಸದಾ ಕುಳಿತುಕೊಳ್ಳುತ್ತಿದ್ದ ಒಂದು ಕಾರ್ಪೆಟ್ ಸಹಿತ ಎಲ್ಲವನ್ನೂ ಬಿಸಿಲಲ್ಲಿ ಒಣಹಾಕುತ್ತಿದ್ದ. ಒಣಗಿದ ಮೇಲೆ, ಅವುಗಳನ್ನು ಚೆನ್ನಾಗಿ ಝಾಡಿಸಿ, ಬ್ರಶ್‌ಮಾಡಿ, ಒಂದು ಅಡ್ಡ ಗಳದ ಮೇಲೆ ತೂಗು ಹಾಕುತ್ತಿದ್ದ. ಅಲ್ಲಿದ್ದ ಆತನ ಅಷ್ಟಿಷ್ಟು ಪೀಠೋಪಕರಣಗಳು ಅವನ ಚಿಕ್ಕ ಕೋಣೆಯನ್ನು ಒಪ್ಪಾಗಿ ಕಾಣುವಂತೆ ಮಾಡಿದ್ದವು. ಅಗತ್ಯ ಬಿದ್ದರೆ, ಇನ್ನೂ ಸಾಕಷ್ಟು ಪೀಠೋಪಕರಣಗಳು ತನ್ನ ಸಂಗ್ರಹದಲ್ಲಿವೆ ಎಂಬ ಸುಳಿವು ನೀಡುವಂತಿದ್ದವು. ಬಹಳಷ್ಟು ಸಲ, ಓರ್ವ ಸೇವಕ ಬೇಕೆನಿಸಿದಾಗ, ಆತ ಒಂದಿಷ್ಟು ಕಾಲ ತನ್ನ ಮನೆಯ ಬಾಗಿಲು ಮುಚ್ಚುತ್ತಿದ್ದ. ಆ ಮೇಲೆ, ತನ್ನ ಅಂಗಿಗಳನ್ನು, ಲಿನೆನ್ ಬಟ್ಟೆಗಳನ್ನು ತಾನೇ ಇಸ್ತ್ರಿ ಮಾಡಿಕೊಳ್ಳುತ್ತಿದ್ದ. ಅನಂತರ ಕೆಲವು ಚಿಕ್ಕ ಪುಟ್ಟ ಮನೆಗೆಲಸಗಳನ್ನು ಮಾಡಿ ಮುಗಿಸುತ್ತಿದ್ದ. ಎಲ್ಲ ಮುಗಿದ ಮೇಲೆ ಬಾಗಿಲು ತೆರೆದು, ಮತ್ತೆ ತನ್ನ ಗೆಳೆಯರನ್ನು ಬರಮಾಡಿಕೊಳ್ಳುತ್ತಿದ್ದ.

ನಾನು ಈ ಮೊದಲೇ ಹೇಳಿದಂತೆ, ಕೈಲಾಸ ಬಾಬು ತನ್ನೆಲ್ಲ ಜಮೀನುಗಳನ್ನು ಕಳೆದುಕೊಂಡಿದ್ದರೂ ವಂಶಪರಂಪರಾಗತ ವೈಭವದ ಕುರುಹಾದ ಕೆಲವು ವಸ್ತುಗಳು ಇನ್ನೂ ಆತನ ಬಳಿ ಉಳಿದುಕೊಂಡಿದ್ದವು. ಸುಗಂಧ ಮಿಶ್ರಿತ ನೀರನ್ನು ಸಿಂಪಡಿಸಲು ಬಳಸುವ ಬೆಳ್ಳಿಯ ಒಂದು ಹೂಜೆ, ಗುಲಾಬಿ ಸುಗಂಧ ದ್ರವ್ಯ ಇರಿಸುವ ಬೆಳ್ಳಿಯ ಒಂದು ಕರಂಡಕ, ಬಂಗಾರ ಗಿಲೀಟಿನ ಒಂದು ತಟ್ಟೆ, ಬೆಲೆ ಬಾಳುವ ಒಂದು ಶಾಲು, ಹಳೆಯ ಶಿಷ್ಟಾಚಾರದ ಒಂದು ಪೋಷಾಕು, ಒಂದು ವಂಶಪಾರಂಪರಿಕ ಮುಂಡಾಸು – ಇವಿಷ್ಟು ವಸ್ತುಗಳು ಅವನ ಬಳಿ ಇದ್ದವು. ಬಹಳ ಕಷ್ಟಪಟ್ಟು ಸಾಲಗಾರರ ಬಿಗಿಮುಷ್ಟಿಯಿಂದ ಆ ವಸ್ತುಗಳನ್ನು ರಕ್ಷಿಸಿಕೊಂಡಿದ್ದ. ಪ್ರತಿಯೊಂದು ಅಗತ್ಯ ಸಂದರ್ಭದಲ್ಲಿ, ಆ ವಸ್ತುಗಳನ್ನು ರಾಜಠೀವಿಯಿಂದ ಹೊರತೆಗೆದು, ತನ್ಮೂಲಕ ಜಗತ್ಪ್ರಸಿದ್ಧವಾಗಿದ್ದ ನಯಾಂಜೋರ ಬಾಬುಗಳ ಕುಲಪ್ರತಿಷ್ಠೆಯನ್ನು ಕಾಪಾಡಿಕೊಳ್ಳುತ್ತಿದ್ದ. ಎಲ್ಲರಿಗಿಂತ ವಿನಯಶೀಲನಾಗಿದ್ದ ಆತ ತನ್ನ ಪ್ರತಿಷ್ಠೆ ಹಾಗೂ ಕುಟುಂಬ ಸ್ವಾಭಿಮಾನದ ಠೀವಿಗೆ ತಕ್ಕಂತೆ ಮಾತಾಡುವುದನ್ನು ಒಂದು ಪವಿತ್ರ ಕರ್ತವ್ಯ ಎಂದು ಪರಿಭಾವಿಸಿದ್ದ. ಆತನ ಈ ವಿಲಕ್ಷಣ ಗುಣ ವಿಶೇಷವನ್ನು ಆತನ ಗೆಳೆಯರು ತಮಾಷೆಗಾಗಿ ಹುರಿದುಂಬಿಸುತ್ತಿದ್ದರು. ಅದು ಅವರಿಗೆ ಬಹಳಷ್ಟು ಮನರಂಜನೆ ಒದಗಿಸುತ್ತಿತ್ತು.

ಬರಬರುತ್ತ ನೆರೆಹೊರೆಯವರು ಆತನ್ನು ಠಾಕೂರ ದಾದಾ (ಅಂದರೆ ಅಜ್ಜ) ಎಂದೇ ಕರೆಯತೊಡಗಿದರು. ಆತನ ಮೇಲಿನ ವೃಥಾ ವೆಚ್ಚದ ಭಾರ ತಪ್ಪಿಸಲೋಸುಗ, ಆತನ ಒಬ್ಬಿಬ್ಬರು ಗೆಳೆಯರು ಆತನಿಗಾಗಿ ತಂಬಾಕು ತೆಗೆದುಕೊಂಡು ಬಂದು ಹೇಳುತ್ತಿದ್ದರು, ''ಠಾಕೂರ ದಾದಾ, ಇಂದು ಮುಂಜಾನೆ ಯಾರೋ ನನಗಾಗಿ ಗಯಾದಿಂದ ತಂಬಾಕು ಕಳಿಸಿದ್ದಾರೆ, ತೆಗೆದುಕೊ, ಅದು ನಿನಗೆ ಇಷ್ಟವಾಗುವುದೊ ಹೇಗೆ ನೋಡು.''

ಠಾಕೂರ ದಾದಾ ಅದನ್ನು ತೆಗೆದುಕೊಂಡು ತುಂಬಾ ಚೆನ್ನಾಗಿದೆ ಎಂದು ಹೇಳುತ್ತಿದ್ದ. ನಯಾಂಜೋರದ ಆ ದಿನಗಳಲ್ಲಿ ಒಂದಾಣೆ ಕೊಟ್ಟರೆ ಮೂವತ್ತು ಗ್ರಾಂನಷ್ಟು ಸಿಗುತ್ತಿದ್ದ ಅತ್ಯುತ್ಕೃಷ್ಟ ತಂಬಾಕನ್ನು ಅವರು ಕೊಂಡುಕೊಂಡು ಸೇದುತ್ತಿದ್ದರು, ಎಂದು ಹೇಳಿ–

''ನೀವು ಯಾರಾದರೂ ಒಬ್ಬರು ಅದನ್ನು ಸೇದ ಬಯಸಿದರೆ, ನನ್ನ ಬಳಿ ಒಂದಿಷ್ಟು ಉಳಿದುಕೊಂಡಿದೆ, ಈಗಲೇ ತಂದು ಕೊಡುವೆ'' ಎಂದು ಹೇಳುವುದು ಅವನಿಗೆ ಅಭ್ಯಾಸವಾಗಿ ಹೋಗಿತ್ತು.

ಯಾರಾದರೂ ಅದನ್ನು ಕೊಡು ಎಂದು ಕೇಳಿದರೆ, ಕಪಾಟಿನ ಬೀಗದ ಕೈ ಎಲ್ಲಿದೆಯೊ ಸಿಗುತ್ತಿಲ್ಲ.